## <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ</u>
## ಸಿ.ಸಿ. ಸಂಖ್ಯೆಃ 225/2020

**ದಿನಾಂಕಃ 06-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲ್ಯೂ- | 06 |
| ಪಿಡಬ್ಲ್ಯೂ- | 06 |

| | |
|---|---|
| ಹೆಸರು | ಉಷಾ |
| ಗಂಡ | ಹರ್ಷವರ್ದನ |
| ವಯಸ್ಸು | 36 ವರ್ಷ |
| ಕೆಲಸ | ಗ್ರಾಮ ಲೆಕ್ಕಾಧಿಕಾರಿ ಎಸಿ ಆಫೀಸ್ ಕೊಪ್ಪಳ |
| ವಾಸಸ್ಥಳ | ಕೊಪ್ಪಳ |

**<u>ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನಾನು ಎಸಿ ಆಫೀಸ್ ನಲ್ಲಿ 2022 ರಿಂದ ಇಲ್ಲಿಯವರೆಗೆ ಕೇಸ್ ವರ್ಕರ್ ಅಂತಾ ಕೆಲಸ ಮಾಡುತ್ತಿದ್ದೇನೆ.

2. ಜೂನ್ 2020 ರಲ್ಲಿ ನಾನು ತಹಶಿಲ್ದಾರ ಆಫೀಸ್ ನಲ್ಲಿ ಪಹಣಿ ತಿದ್ದುಪಡೆ ಸೆಕ್ಷನ್ ನಲ್ಲಿ ಕೆಲಸ ಮಾಡುತ್ತಿದ್ದೇ, ಅರ್ಜಿದಾರ ಶರಣಪ್ಪ ಗಾಳಿ ಇವರಿಗೆ ಕೊಪ್ಪಳದ ಜಮೀನು ಸರ್ವೇ ನಂ. 271/1 ಕ್ಷೇತ್ರ 5 ಎಕರೆ ಸಂಬಂದಪಟ್ಟಂತೆ ಅದಕ್ಕಿಂತ ಮೊದಲು ಪಹಣಿ ತಿದ್ದು ಪಡೆ ಸಕ್ಷನ್ ನಲ್ಲಿ ಕೆಲಸ ಮಾಡುತ್ತಿದ್ದ ಕುಮಾರ ಹಳ್ಳಿಯವರಿಗೆ ಅರ್ಜಿ ಕೊಟ್ಟಿದ್ದ. 5 ಎಕರೆ ಪೈಕಿ 3 ಎಕರೆ ನಮ್ಮ ಹೆಸರಿಗೆ ದಾಖಲಾಗಿದೆ, ಇನ್ನೂ 2 ಎಕರೆ ನರಸಪ್ಪ ತಂದೆ ವೆಂಕಪ್ಪ ಇವರ ಹೆಸರಿಗೆ ಉಳಿದುಕೊಂಡಿದೆ, ಸದರಿ ನರಸಪ್ಪರವರ ಹೆಸರನ್ನು ಕಡಿಮೆ ಮಾಡಿ ಆ 2 ಎಕರೆ ಜಮೀನನ್ನು ಸಹ ನನ್ನ ಹೆಸರಿಗೆ ದಾಖಲಿಸಿ ಕೊಡಿ ಎಂದು ಕೇಳಿ ಅರ್ಜಿ ಕೊಟ್ಟಿದ್ದರು.

3. ನಿಮ್ಮ ಹೆಸರಿಗೆ ಇರುವ ಸಂಪೂರ್ಣ ಜಮಿಜೀನನ್ನು ನೀವು ಈಗಾಗಲೇ ಮಾರಾಟ ಮಾಡಿದ್ದೀರಿ ನಿಮ್ಮ ಹೆಸರಿಗೆ ಯಾವುದೇ ಜಮೀನು ಉಳಿದಿಲ್ಲ, ಆಕಾರ ಬಂದ್ ಪ್ರಕಾರ ಪಹಣಿಯಲ್ಲಿ ಕಾಣಿಸಿದ ಕ್ಷೇತ್ರ ಸರಿಯಾಗಿ ಇದೆ, ಈ 2 ಎಕರೆ ಜಮೀನನ್ನು ನಿಮ್ಮ ಹೆಸರಿಗೆ ಹಚ್ಚಲು ಬರುವುದಿಲ್ಲ ಎಂದು ಹಿಂಬರಹ ಕೊಟ್ಟಿದ್ದರು. ಜೂನ್ 2020 ನಲ್ಲಿ ಅಧಿಕಾರ ವಹಿಸಿಕೊಂಡೆ, ಅಕ್ಟೊಬರ್ 2020 ರಲ್ಲಿ ಶಂಶು ವಕೀಲರು ನಮ್ಮ ತಹಶೀಲ್ದಾರ ಸಾಹೆಬರಿಗೆ ಒಂದು ನೊಟಿಸ್ಸು ಕೊಟ್ಟಿದ್ದರು. ಅದರಲ್ಲಿ ಸರ್ವೇ ನಂ. 271 ರಲ್ಲಿ ಶರಣಪ್ಪ ಗಾಳಿರವದ್ದು 2 ಎಕರೆ ಜಮೀನು ಉಳಿಯುತ್ತದೆ, ಕೈಬರಹ ಪಹಣಿಯಲ್ಲಿ

ಮೂಲ ಮಾಲೀಕ ನರಸಪ್ಪ ತಂದೆ ವೆಂಕಪ್ಪ ಗಾಳಿ ಎಂದು ಇದ್ದು, ಅವರ ಜಮೀನು ಶರಣಪ್ಪ ಗಾಳಿಯವರಿಗೆ ಬರುತ್ತದೆ ಅಂತಾ ಹೇಳಿದ್ದರು. ಅದರೊಂದಿಗೆ ಕೈಬರಹ ಪಹಣಿಯನ್ನು ಲಗತ್ತಿಸಿದ್ದರು.

4. ಶರಣಪ್ಪ ಗಾಳಿ ಇವರು ತಾವು ಕೊಟ್ಟ ಅರ್ಜಿಯೊಂದಿಗೆ ಲಗತ್ತಿಸಿದ ಪಹಣಿ ಪತ್ರಿಕೆಯನ್ನು ನಮ್ಮ ಕಚೇರಿಯಲ್ಲಿ ಇದ್ದ ಮೂಲ ದಾಖಲಾತಿಯೊಂದಿಗೆ ತಾಳೆ ಹಾಕಿ ಸದರಿ ಪಹಣಿ ಪತ್ರಿಕೆ ಪರಿಶೀಲನೆ ಮಾಡಿದಾಗ, ನರಸಪ್ಪ ತಂದೆ ವೆಂಕಪ್ಪ ಮಾತ್ರ ಇದ್ದ ಜಾಗೆಯಲ್ಲಿ ನರಸಪ್ಪ ತಂದೆ ವೆಂಕಪ್ಪ ಗಾಳಿ ಎಂದು ತಿದ್ದುಪಡೆ ಮಾಡಿ, ಕಾಲಂ ನಂ. 9 ಮತ್ತು 12 ರಲ್ಲಿ ತಿದ್ದು ಪಡೆ ಮಾಡಿದ್ದು ಕಂಡು ಬಂತು, ತಹಶೀಲ್ದಾರವರು ಶಂಶು ವಕೀಲರಿಗೆ ನೊಟಿಸ್ಸು ಕೊಟ್ಟು ನೀವು ಕೊಟ್ಟ ಪಹಣಿ ಪತ್ರಿಕಯಲ್ಲಿ ಹೆಸರಿನೊಂದಿಗೆ ಗಾಳಿ ಎಂಬ ಅಡ್ಡ ಹೆಸರು ಸೇರಿಕೊಂಡಿದೆ, ಈ ಕುರಿತು ಈ ಕಾರ್ಯಾಲಯದಿಂದ ಪಡೆದ ಮೂಲ ಪಹಣಿ ಪತ್ರಿಕೆಯನ್ನು ಹಾಜರುಪಡಿಸಲು ಕೇಳಿದರು.

5. ಆಗ ಶಂಶು ವಕೀಲರು ಲಿಖಿತವಾಗಿ ಮತ್ತೆ ಉತ್ತರ ಕೊಟ್ಟು ನಾನು ನೀಡಿದ ನೊಟಿಸ್ಸು ತಪ್ಪಾಗಿರುತ್ತದೆ, ಸದರಿ ನೊಟಿಸ್ಸು ವಾಪಸ್ಸು ಪಡೆಯುತ್ತೇನೆ, ನಮ್ಮ ಕಕ್ಷಿದಾರ ಕೊಟ್ಟ ದಾಖಲೆಯನ್ನು ನಿಮಗೆ ಸಲ್ಲಿಸಿರುತ್ತೇನೆ, ತಿದ್ದುಪಡೆ ಮಾಡಿ ಗಾಳಿ ಎಂದು ಸೇರಿಸಿದ್ದು ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ಲಿಖಿತವಾಗಿ ಹೇಳಿದರು.

6. ನಂತರ ಶರಣಪ್ಪ ಗಾಳಿ ಇವರಿಗೆ ನಮ್ಮ ತಹಶೀಲ್ದಾರವರು ನೊಟಿಸ ನೀಡಿ, ಗಾಳಿ ಎಂಬ ಶಬ್ದವನ್ನು ನೀವೆ ಬರೆದಿರುತ್ತೀರಿ ಕೇಳಿದರು, ಆಗ ಶರಣಪ್ಪ ಗಾಳಿಯವರು ಲಿಖಿತವಾಗಿ ಉತ್ತರ ನಿಡಿ ನಾನು ತಹಶೀಲ್ದಾರ ಕಚೇರಿಯಿಂದ ಪಡೆದ ಪಹಣಿ ಪತ್ರಿಕೆಯಲ್ಲಿ ವೆಂಕಪ್ಪ ತಂದೆ ನರಸಪ್ಪ ಎಂದು ಮಾತ್ರ ಇತ್ತು ಅದರ ಪ್ರತಿಯನ್ನು ಮಾತ್ರ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ, ಅದಕ್ಕೆ ಗಾಳಿ ಎಂಬ ಶಬ್ದ ಸೇರಿಸಿ ಅರ್ಜಿಯೊಂದಿಗೆ ಅದರ ಪ್ರತಿ ಲಗತ್ತಿಸಿಕೊಟ್ಟಿದ್ದು ನನಗೆ ಗೊತ್ತಿಲ್ಲ ಎಂದು ಬರೆದುಕೊಟ್ಟರು.

7. ಆಗ ರೆಕಾರ್ಡ ರೂಮ್ ಶಿರಸ್ತೆದಾರರಾದ ಪ್ರಭಾಕರ ಭಟ್ಟ ರವರು ತಹಶೀಲ್ದಾರವರು ಲಿಖಿತ ನಿರ್ದೇಶನ ನೀಡಿ, ಸರ್ವೆ ನಂ. 271/1 ರ ಪಹಣಿ ಪತ್ರಿಕೆಯಲ್ಲಿ ತಿದ್ದುಪಡೆ ಮಾಡಿದರ ಕುರಿತು ಶರಣಪ್ಪ ಇವರ ವಿರುದ್ದ ಫಿರ್ಯಾದಿ ಸಲ್ಲಿಸಲು ಹೇಳಿದರು, ಅದರಂತೆ ಪ್ರಭಾಕರ ಭಟ್ಟರವರು ಶರಣಪ್ಪ ಗಾಳಿ ವಿರುದ್ದ ಕೊಪ್ಪಳ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು.

8. ಈ ಕುರಿತು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಅಬಿಲೇಖಾಲಯದ ಜವಾಬ್ದಾರಿ ನನಗೆ ಇಲ್ಲ,

ಆದರಲ್ಲಿ ನಾನು ಕೆಲಸ ಮಾಡುವುದಿಲ್ಲ, ನನಗೆ ಪಹಣಿ ತಿದ್ದುಪಡೆ ಮಾಡುವ ವಿಷಯ ಮಾತ್ರ ನೊಡಿಕೊಳ್ಳುತ್ತೇನೆ. ಆ ವಿಭಾಗ ಮಾತ್ರ ನೊಡಿಕೊಳ್ಳುತ್ತೇನೆ. ಶರಣಪ್ಪ ಗಾಳಿಗೆ ಸಂಬಂದಪಟ್ಟ ಕಡತವನ್ನು ಈಗ ಕೆಲಸ ಮಡುತ್ತಿರುವ ಮಂಜುನಾಥ ಎನ್ನುವವರಿಗೆ ಕೊಟ್ಟಿದ್ದೇನೆ.

10. ಶರಣಪ್ಪ ಗಾಳಿ ಇವರು ಕೊಟ್ಟ ಅರ್ಜಿ ಪ್ರತಿ, 14-01-2019 ರಲ್ಲಿ ತಹಶೀಲ್ದಾರ ಕೊಟ್ಟ ಹಿಂಬರಹ, ದಿಃ- 13-01-2020 ಶಂಶು ವಕಿಲರು ಕೊಟ್ಟ ನೊಟಿಸ, ದಿಃ- 31-01-2020 ಕ್ಕೆ ತಹಶೀಲ್ದಾರ ಕೊಟ್ಟ ಉತ್ತರ, ದಿಃ- 20-02-2020 ರಂದು ಶಂಶು ವಕೀಲರು ಸದರಿ ನೊಟಿಸ ಹಿಂಪಡೆದ ಪತ್ರ, ತಹಶೀಲ್ದಾರ ಅಬಿಲೇಖಾಲಯ ಶಿರಸ್ತೆದರಾರಿಗೆ ಕೊಟ್ಟ ನೊಟಿಸ, ಫಿರ್ಯಾದಿ ಕೊಡಲು ಸೂಚಿದರು, ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ನಿಪಿ 2 ರಿಂದ 8 ಎಂದು ಗುರುತಿಸಲಾಗಿದೆ, ಸಾಕ್ಷಿ ಆರೋಪಿಗೆ ನೋಡಿ ಗುರುತಿಸಿದ್ದಾರ.

**<u>ಪಾಟೀ ಸವಾಲು : ಆರೋಪಿ ಪರ</u> ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

**<u>(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)</u>**

ಓ.ಹೇ.ಕೇ. ಸರಿ ಇದೆ.
ಸಹಿ/-
**ಸಿ.ಜೆ.ಎಮ್., ಕೊಪ್ಪಳ.**